ವರ್ಷಗಳಿಂದ ನಮ್ಮೊಡನಿದ್ದಾನೆ. ಇವನೊಬ್ಬನೇ ನಮ್ಮಲ್ಲಿರುವ 'ಇನ್‌ಹೌಸ್' ಹೆಲ್ಪು! ಒಳಾನುಕೂಲ! ಅರ್ಥಾತ್ ರಾತ್ರಿಯೂ ಒಡತಂಗುವ ಕೆಲಸದಾಳು!!

ಒಂದಾನೊಮ್ಮೆ, ಅಂದರೆ ವೇದಕಾಲದಲ್ಲಿ, ಯಜಮಾನನು ಎಷ್ಟು ಹಸುಗಳನ್ನು ಹೊಂದಿದ್ದಾನೆಂಬುದನ್ನು ಆಧರಿಸಿ ಅವನ ಘನತೆ ನಿರ್ಧಾರವಾಗುತ್ತಿತ್ತಂತೆ! ಅಂದರೆ ಗೋಸಂಪದವೇ ಆ ಕಾಲಕ್ಕೆ ನಿಜವಾದ ಸಂಪತ್ತು! ಈಗ ಹಾಗಲ್ಲ. ಈ ಮಹಾನಗರಿಯಲ್ಲಿ, ಚಾಕರಿಗಿರುವ ಮಂದಿಯೇ ಮನೆಯ ಮಹತ್ತು ನಿರ್ಣಯಿಸುತ್ತಾರೆ. ಅಸಲಿನಲ್ಲಿ ಇದು ಮನೆತನದ ಮಹತ್ವ ಕೂಡ! ಆದರೆ ವಿಷಯ ಹೇಳುವಷ್ಟು ಸಲೀಸೇನಲ್ಲ. ನಿಮಗೆ ಗೊತ್ತಿದೆಯೋ ಕಾಣೆ, ಈ ಇಪ್ಪತ್ತೊಂದನೇ ಶತಮಾನವಾದರೂ ವೆರಿ ವೆರಿ ದುರಿತವೇ ಸರಿ. ಈ ಮಹಾನಗರಿಯಲ್ಲಿ ಬೇಕೆನ್ನುವಾಗ ಕೆಲಸಕ್ಕೆ ಮಂದಿ ಸಿಗುವುದಿಲ್ಲ. ಸಿಗುವಾಗ ನಮಗೆ ಬಿಡುವಿರುವುದಿಲ್ಲ! ಅದರಲ್ಲೂ ಈಗೀಗ ಹೇಗಾಗಿದೆಯೆಂದರೆ, ಎಂಥದೇ ದುಡ್ಡಿಗೂ ಕೆಲಸದವರೊದಗುವುದು ಕಷ್ಟವಾಗಿಬಿಟ್ಟಿದೆ. ಬಚ್ಚಲು ಕಟ್ಟಿದರೆ, ನಲ್ಲಿ ಸೋರಿದರೆ, ಗೀಸರು ಕೈಕೊಟ್ಟರೆ, ಪಂಪು ಮುನಿಸಿಕೊಂಡರೆ... ಊಹ್ಞುಂ, ರಿಪೇರಿಯ ಜನ ತಕ್ಷಣಕ್ಕೆ ದಕ್ಕುವುದಿಲ್ಲ. ಮಂಚ ಮುರಿಯಿತಾದರೆ ಹೊಸತು ಕೊಳ್ಳುವುದೇ ಪರಿ ಹೊರತು, ಬಡಿದು ಸರಿಪಡಿಸುವ ಬಡಗಿ ಬರುವುದಿಲ್ಲ! ದುಬಾರಿ ಪ್ಯಾಂಟೊಂದರ ಜಿಪ್ಪು ಕೆಟ್ಟರೆ, ತಕ್ಷಣ ಎಸೆಯುವುದೇ ವಿನಃ, ಆ ಜಿಪ್ಪಿನಾಣೆ, ಪ್ಯಾಂಟು ರಿಪೇರಿಯಾಗುವುದಿಲ್ಲ! ಒಟ್ಟಿನಲ್ಲಿ ನಾವು ಆಗಿಕೊಂಡಿರುವ ಕಾಲದ ಮಹಿಮೆಯೇ ಹೀಗೆ; ನಿಜ ಸಂಪತ್ತಿನ ನಿಗದಿಗೆ ದನ ಬೇಕಾಗುವುದಿಲ್ಲ; ಜನ ಕೈಗೊದಗುವುದಿಲ್ಲ!!

ಇದೇ ಕಾರಣಕ್ಕೇನೇ, ಇದ್ದವರಿಗೆಲ್ಲ ಕೆಲಸವಿರಲಿ ಬಿಡಲಿ, ಒಂದಲ್ಲ ಎರಡಲ್ಲ ಅಂತ ನಾಲ್ಕಾರು ಮಂದಿಯನ್ನು ದುಡ್ಡು ಕೊಟ್ಟು ಇಟ್ಟುಕೊಳ್ಳುವುದಾಗಿದೆ. ಒಬ್ಬರು ಕೈಕೊಟ್ಟರೆ ಇನ್ನೊಬ್ಬರು ಕೈಗಾದಾರೆಂಬ ಉಮೇದಿನಿಂದ! ಒಬ್ಬರ ಬೇಕಾಬಿಟ್ಟಿತನವನ್ನು ಇನ್ನೊಬ್ಬರ ನಿಯತ್ತು ಸಂಭಾಳಿಸುವುದೆಂಬ ನಂಬುಗೆಯ ಮೇರೆಗೆ!

ಇರಲಿ. ನಮ್ಮ ಮನೆಯ ಏಕೈಕ 'ಒಳಾನುಕೂಲ'ವಿದ್ದಾನಲ್ಲ, ಅಂದರೆ ಮೊದಲು ಹೇಳಿದ 'ಇನ್‌ಹೌಸ್' ಹೆಲ್ಪು ಅವನ ಬಗ್ಗೆ ಮಾತು ಬೆಳೆಸಲೇಬೇಕು. ಈ ಇಡೀ 'ಕಾರ್ಪಣ್ಯ'ಪ್ರಸಂಗದ ಕರ್ತಾರನಾದರೂ ಅವನೇನೇ!

ತಪಸ್‌ನ ಪೂರ್ತಾ ಹೆಸರು 'ತಪಸ್ ಕೊಲಿಯಾರ್'. ತಪಸ್ ಅಂದರೆ ಅವನು; ಕೊಲಿಯಾರ್ ಸರ್ನೇಮು. ಮೊದಲ ಸಲ ಅವನ ಈ ಹೆಸರು ಕೇಳುವಾಗ, ಏನಂತ ತಿಳಿದಿರಲಿಲ್ಲ. ತಪಸ್ ಅಂತಂದರೆ ನಿಖರವಾಗಿ ಸಂಸ್ಕೃತದ 'ತಪಸ್ಸು' ಎಂದರಿಯಲಿಕ್ಕೆ ಕೆಲಕಾಲವೇ ಬೇಕಾಗಿತ್ತು! 'ಮೇ ತಪಶ್ ಹೂ, ಸರ್...' ಎಂದು ಹೇಳಿದ್ದಕ್ಕೆ, 'ಕ್ಯಾ? ಕ್ಯಾ ಬೋಲಾ?' ಎಂದು ಮತ್ತೆ ಮತ್ತೆ ಕೇಳಿ, ಪುನಃ ಪುನಃ ಹೇಳಿಸಿ ಖಾತ್ರಿಪಡಿಸಿಕೊಂಡಿದ್ದಾಯಿತು. 'ತಪಶ್ ಕಾ ಮತಲಬ್ ಕ್ಯಾರೇ?' ಅನ್ನುವಾಗ, 'ತಪಸ್ಯಾ, ಸಾಬ್‌ಜೀ' ಅಂತಂದು, ತನ್ನ ಹೆಸರು ನಿಸ್ಸಂಶಯವಾಗಿ 'ತಪಸ್ಸೇ' ಹೌದೆಂದು ದೃಢೀಕರಿಸಿದ್ದ! ಇಷ್ಟಿದ್ದೂ ಈ ಹೆಸರನ್ನು ಅರಗಿಸಿಕೊಳ್ಳುವುದೇ ನಮಗೊಂದು ತಪಸ್ಸಾಗಿಹೋಯಿತು! ಯಾಕೆಂದರೆ, ನನಗೆ ಈವರೆಗೆ ಕಾಣಸಿಕ್ಕ ಈ ಹೆಸರಿನ ಮೊದಲ ಮನುಷ್ಯ ಈ ತಪಸ್ಸಾಗಿದ್ದ! 'ನಿನ್ನ ಅಣ್ಣತಮ್ಮ, ಅಕ್ಕತಂಗಿಯರ ಹೆಸರು ಹೇಳು!' ಕುತೂಹಲದಿಂದ ಕೇಳಿದೆ. ದೊಡ್ಡಣ್ಣನ ಹೆಸರು 'ಛಂದಸ್' ಅಂತಲಂದ. ಚಿಕ್ಕವನು 'ಹವಿಸ್' ಅಂತಲಂತೆ. ಇವನು ಮೂರನೆಯವನು. ಒಬ್ಬ ತಂಗಿಯಿದ್ದಾಳಂತೆ; ಅವಳು 'ಸರಸ್'! ಇಷ್ಟು ಸಪ್ರಾಸ ಸಂಸ್ಕೃತದ ಖಗ್ರಾಸ ಹೆಸರು ಕೇಳಿಸಿಕೊಂಡ ಮೇಲೆ, ನನಗೆ, ನಿಜಕ್ಕೂ ಈ ಜನುಮ